ಳವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಗೃಹಮಂಡಳಿಯ ಮಾಜಿ ಅಧ್ಯಕ್ಷರನ್ನು ಅರೆಸ್ಟ್ ಮಾಡಬೇಕು. ಹಾಗೂ ಇಂಟ್ರೀಮ್ ರಿಪೋರ್ಟ್ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳಿ, ಸರಕಾರಕ್ಕೆ ಒತ್ತಾಯ ಮಾಡಿ ನಾವು ಧರಣಿ ಕುಳಿತುಕೊಳ್ಳುತ್ತೇವೆ. ಕಂಟ್ರಾಕ್ಟರ್ ಜೊತೆ ಶಾಮೀಲಾಗಿ ಜನರ ಹಣವನ್ನು ಲೂಟಿ ಮಾಡಿದ್ದಾರೆ. 20 ಕೋಟಿಗಳ ಅವ್ಯವಹಾರವಾಗಿದ್ದರೂ ಇಂಟ್ರೀಮ್ ರಿಪೋರ್ಟ್ ಬಗ್ಗೆ ಚರ್ಚೆ ಮಾಡ್ಲಿಕ್ಕೆ ಇದು ಬೇಡವೇ?...

(ಮಾನ್ಯ ಬಿಜೆಪಿಯ ಸದಸ್ಯರುಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಕೆ.ಎಸ್. ಈಶ್ವರಪ್ಪ, ಶ್ರೀ ನಾರಾಯಣರಾವ್ ಮನವಳ್ಳಿಯವರು ಭಾವಿಗೆ ಬಂದು ಧರಣಿ ಕುಳಿತರು)

ಶ್ರೀ ಕೆ.ಎಸ್. ಈಶ್ವರಪ್ಪ:- ಅವ್ಯವಹಾರ ಮಾಡಿದ ಅಧಿಕಾರಿಯನ್ನು ಅರೆಸ್ಟ್ ಮಾಡಬೇಕು, ಸರಕಾರವು ಭ್ರಷ್ಟ ಅಧ್ಯಕ್ಷರನ್ನು ರಕ್ಷಣೆ ಮಾಡುತ್ತಿದೆ... ನಮಗೆ ನ್ಯಾಯ ಬೇಕು.

ಶ್ರೀಮತಿ ರೇಣುಕಾ ರಾಜೇಂದ್ರನ್ :- ಮಾನ್ಯ ಅಧ್ಯಕ್ಷರೇ, ತಾವುಗಳು ಅನುಮತಿ ಕೊಡದೆಯೇ ಈ ಚರ್ಚೆ ನಡೆಯುತ್ತಾ ಇದೆ...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ಸಮಸ್ಯೆಯಾಗಿದೆ. ಇದರ ಬಗ್ಗೆ ಸರಕಾರದವರು ದೊಡ್ಡ ಮನಸ್ಸು ಮಾಡಿ ಹೇಳಬೇಕಾಗಿತ್ತು. ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಿದ್ದಾರೆ, ನಮ್ಮದು ಫ್ರೀ ಗವರ್ನಮೆಂಟ್, ಓಪನ್ ಗವರ್ನಮೆಂಟ್, ಇಲ್ಲಿ ಅವ್ಯವಹಾರ ಏನೂ ನಡೆಯುವುದಿಲ್ಲ, ... ಏನು ಮಾಡಿದ್ದೀರಿ ನೀವು?...

(ಗೊಂದಲ)

ಶ್ರೀ ಧರ್ಮಸಿಂಗ್ :- ಸಿಓಡಿ ರಿಪೋರ್ಟ್ ಬಂದ ಮೇಲೆ ಮಾತನಾಡಿ....

Sri K.H. Ranganath :- He has to be fair. ಮಾನ್ಯ ವಿರೋಧಪಕ್ಷದ ನಾಯಕರುಗಳಿಗೆ ನಾವು ಈ ಸದನದಲ್ಲಿ ಬಹಳ ಗೌರವ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಬೇಕು. ನಾನು ಈ ವಿಷಯದಲ್ಲಿ ನನ್ನ ನಿರ್ಣಯವನ್ನು ಕೊಟ್ಟಿದ್ದೇನೆ. ಮುಂದಿನ ವಿಷಯಕ್ಕೆ ನಾನು ಹೋಗುತ್ತಿದ್ದೇನೆ. ಮಾನ್ಯ ಸದಸ್ಯರುಗಳು ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

Dr. Jeevaraj Alva :- COD apart from being an investigating authority, suo-moto they can file an F.I.R. This is the existing system. ನಾನೂ ಕೂಡ ತಮ್ಮಷ್ಟೇ ಈ ವಿಚಾರದಲ್ಲಿ ಕಳಕಳಿ ಹೊಂದಿರುವವನು, ಆದರೆ justice should be seem to have been given ಆದ್ದರಿಂದ ಇವೊತ್ತು ರಿಪೋರ್ಟ್ ಬಂದಿದೆ, ನಾಳೆಯ ವರೆಗೆ ಅವರು ಎಫ್ಐಆರ್ ಸಬ್‌ಮಿಟ್ ಮಾಡುತ್ತಾರೋ ಇಲ್ಲವೋ ಎಂದು ಕಾಯಬೇಕಾದುದು ಅವಶ್ಯಕ. ಏಕೆಂದರೆ ಸರಕಾರವು ಇದರಲ್ಲಿ ಬರುವುದಿಲ್ಲ. The point is, we have demanded a COD enquiry. The minute the Government has instituted a COD enquiry, the duty of the Government is over. The entire responsibility lies